# ಹಾಡು ವಿವಾದಕ್ಕೆ ಪ್ರೇಮ್ ಕ್ಷಮೆ!



‘ಕೆಡಿ: ದ ಡೆವಿಲ್’ ಚಿತ್ರದ ‘ಸರ್ಸೆ ನಿನ್ನ ಸೆರಗ ಸರ್ಸೆ’ ಹಾಡಿನ ಸುತ್ತ ದೇಶಾದ್ಯಂತ ಭಾರೀ ವಿವಾದ ಎದ್ದಿರುವ ನಡುವೆಯೇ ನಿರ್ದೇಶಕ ಜೋಗಿ ಪ್ರೇಮ್ ಕೊನೆಗೂ ಮೌನ ಮುರಿದು ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸಿದ್ದಾರೆ. ಹಾಡಿನಲ್ಲಿ ಅಶ್ಲೀಲ ಅಂಶಗಳಿವೆ ಎಂಬ ಆರೋಪಗಳಿಗೆ ಸ್ಪಷ್ಟನೆ ನೀಡಿದ ಅವರು, ಯಾರೊಬ್ಬರಿಗೂ ನೋವುಂಟು ಮಾಡುವ ಉದ್ದೇಶದಿಂದ ಈ ಹಾಡನ್ನು ರಚಿಸಿಲ್ಲ ಎಂದು ಹೇಳಿದ್ದಾರೆ. ಈ ಕುರಿತಾಗಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹಂಚಿಕೊಂಡಿರುವ ಪ್ರೇಮ್, ಅಗತ್ಯವಿದ್ದರೆ ಹಾಡನ್ನು ಪುನಃ ಬರೆಯಲು ಸಿದ್ಧನಿದ್ದೇನೆ ಎಂದು ಘೋಷಿಸಿದ್ದಾರೆ. ಈ ಹೇಳಿಕೆ ಇದೀಗ ಸಿನಿ ವಲಯದಲ್ಲೂ ಹಾಗೂ ಸಾಮಾಜಿಕ ಜಾಲತಾಣಗಳಲ್ಲೂ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಹಾಡಿನ ಸಾಹಿತ್ಯದ ಬಗ್ಗೆ ಉತ್ತರ ಭಾರತದಲ್ಲಿ ವಿಶೇಷವಾಗಿ ಆಕ್ರೋಶ ವ್ಯಕ್ತವಾಗಿದ್ದು, ಹಿಂದಿ ಆವೃತ್ತಿಗೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಆ ಹಾಡನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎನ್ನಲಾಗಿದೆ. ಇದರಿಂದಾಗಿ ಚಿತ್ರತಂಡದ ಮೇಲೆ ಒತ್ತಡ ಹೆಚ್ಚಾಗಿದ್ದು, ನಟಿ ನೋರಾ ಫತೇಹಿ ಹಾಗೂ ಹಿಂದಿ ಸಾಹಿತಿ ರಕೀಬ್ ಆಲಂ ವಿರುದ್ಧವೂ ಟೀಕೆಗಳು ಕೇಳಿಬಂದಿವೆ. ಈ ಸಂದರ್ಭದಲ್ಲಿ ಇಬ್ಬರೂ ನಿರ್ದೇಶಕ ಪ್ರೇಮ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿರುವುದು ವಿವಾದವನ್ನು ಮತ್ತಷ್ಟು ತೀವ್ರಗೊಳಿಸಿದೆ. ಈ ಎಲ್ಲಾ ಬೆಳವಣಿಗೆಗಳ ನಂತರ ಪ್ರೇಮ್ ಸ್ಪಷ್ಟನೆ ನೀಡಿರುವುದು ಗಮನಾರ್ಹವಾಗಿದೆ.

ತಮ್ಮ ಸ್ಪಷ್ಟನೆಯಲ್ಲಿ ಪ್ರೇಮ್, ಆನಾನು ಈ ಹಾಡನ್ನು ಅಶ್ಲೀಲ ಉದ್ದೇಶದಿಂದ ಬರೆಯಲಿಲ್ಲ. ನನ್ನ ದೃಷ್ಟಿಕೋನದಲ್ಲಿ ಒಂದು ಕಲ್ಪನೆಯ ಆಧಾರದ ಮೇಲೆ ರಚಿಸಿದೆ. ಒಂದು ಬಾಟಲ್ ಮತ್ತು ಅದರ ಸುತ್ತಲಿನ ವಿಷಯವನ್ನು ಕೇಂದ್ರವಾಗಿಸಿಕೊಂಡು ಹಾಡು ಬರೆಯಲಾಗಿದೆ. ಕೆಲವರು ಅದರ ಅರ್ಥವನ್ನು ಬೇರೆ ದಿಕ್ಕಿನಲ್ಲಿ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಕೆಲವು ಪದಗಳನ್ನು ಬೇರೆ ರೀತಿಯಲ್ಲಿ ಬಳಸಿ ವಿವಾದ ತಪ್ಪಿಸಬಹುದಾಗಿದ್ದರೂ, ಕುತೂಹಲ ಮೂಡಿಸುವ ಉದ್ದೇಶದಿಂದ ಅದನ್ನು ಹಾಗೆಯೇ ಉಳಿಸಿದ್ದಾಗಿ ಅವರು ತಿಳಿಸಿದ್ದಾರೆ.

ಇಲ್ಲಿಯವರೆಗೆ ತಾಯಿ, ದೇವರು, ಪ್ರೀತಿ ಮತ್ತು ಸಹೋದರತ್ವದಂತಹ ಮೌಲ್ಯಗಳ ಬಗ್ಗೆ ಹಾಡುಗಳನ್ನು ಬರೆದು ಪ್ರೇಕ್ಷಕರ ಮೆಚ್ಚುಗೆ ಪಡೆದಿದ್ದೇನೆ. ನನ್ನ ಹಾಡುಗಳಿಗೆ ಜನರು ಸದಾ ಪ್ರೀತಿ ನೀಡಿದ್ದಾರೆ. ಆದರೂ ಈ ಬಾರಿ ಉಂಟಾದ ವಿವಾದ ನನ್ನನ್ನು ಕಳವಳಗೊಳಿಸಿದೆ ಎಂದು ಅವರು ಹೇಳಿದ್ದಾರೆ. ಆನಾನು ಇಂದಿಗೂ ಅಶ್ಲೀಲವಾಗಿ ಅಥವಾ ಯಾರನ್ನಾದರೂ ನೋಯಿಸುವ ರೀತಿಯಲ್ಲಿ ಸಾಹಿತ್ಯ ಬರೆಯಲಿಲ್ಲ. ಮುಂದೆಯೂ ಬರೆಯುವುದಿಲ್ಲ. ಆ ರೀತಿಯ ಅವಶ್ಯಕತೆಯೂ ನನಗಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ವಿವಾದದ ನಡುವೆ ತಮ್ಮ ಹಾಗೂ ಕುಟುಂಬದ ಮೇಲೆ ವ್ಯಕ್ತವಾಗುತ್ತಿರುವ ಟೀಕೆಗಳ ಕುರಿತು ಮಾತನಾಡಿದ ಪ್ರೇಮ್, ‘ಕೆಲವರು ಲೈಕ್ ಮತ್ತು ಕಮೆಂಟ್ಗಾಗಿ ನಿಂದಿಸುತ್ತಿದ್ದಾರೆ. ನನ್ನ ಕುಟುಂಬದವರನ್ನೂ ಟೀಕಿಸುತ್ತಿದ್ದಾರೆ. ಇದು ನೋವು ತಂದರೂ ಸಹ ನಾನು ಅದನ್ನು ಸಹಿಸಿಕೊಳ್ಳುತ್ತೇನೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ಆಶಿಸುತ್ತೇನೆ’ ಎಂದು ತಿಳಿಸಿದ್ದಾರೆ. ಟೀಕಾಕಾರರ ವಿರುದ್ಧ ತೀವ್ರವಾಗಿ ಪ್ರತಿಕ್ರಿಯಿಸದೆ, ಸಹನೆಯಿಂದ ಪ್ರತಿಕ್ರಿಯಿಸಿರುವುದು ಗಮನಸೆಳೆಯುತ್ತಿದೆ.


ಹಾಡಿನಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆಯಾಚಿಸುವುದಾಗಿ ಹೇಳಿದ ಪ್ರೇಮ್, ‘ಕ್ಷಮೆ ಕೇಳುವುದರಲ್ಲಿ ತಪ್ಪೇನಿಲ್ಲ. ಮತ್ತೊಬ್ಬರಿಗೆ ನೋವುಂಟುಮಾಡಿ ಬದುಕಬೇಕೆಂಬ ಉದ್ದೇಶ ನನಗಿಲ್ಲ. ಒಂದು ವೇಳೆ ನನ್ನ ಹಾಡು ಯಾರಿಗಾದರೂ ಬೇಸರ ತಂದಿದ್ದರೆ ನಾನು ಹೃತ್ಪೂರ್ವಕವಾಗಿ ಕ್ಷಮೆ ಕೋರುತ್ತೇನೆ’ ಎಂದು ಹೇಳಿದ್ದಾರೆ. ಇದೇ ವೇಳೆ, ‘ಹಾಡನ್ನು ರಿರೈಟ್ ಮಾಡಿ, ಮತ್ತೆ ಸರಿಪಡಿಸಿ ದೇಶಾದ್ಯಂತ ಬಿಡುಗಡೆ ಮಾಡುತ್ತೇನೆ’ ಎಂದು ತಿಳಿಸಿದ್ದಾರೆ.



ಹಿಂದಿ ಆವೃತ್ತಿಯ ಕುರಿತು ಮಾತನಾಡಿದ ಅವರು, ‘ಹಿಂದಿ ಭಾಷೆ ನನಗೆ ಸಂಪೂರ್ಣವಾಗಿ ತಿಳಿದಿಲ್ಲ. ರಕೀಬ್ ಆಲಂ ಅವರು ಕನ್ನಡ ಸಾಹಿತ್ಯವನ್ನು ಅನುವಾದ ಮಾಡಿದ್ದಾರೆ. ಅವರು ವಿವಾದದಿಂದಾಗಿ ಕೆಲ ಹೇಳಿಕೆಗಳನ್ನು ನೀಡಿರಬಹುದು. ಅವರು ನಮ್ಮ ತಂಡದ ಭಾಗವಾಗಿದ್ದು, ಎಲ್ಲಾ ಹಾಡುಗಳನ್ನೂ ಅವರೇ ಬರೆದಿದ್ದಾರೆ’ ಎಂದು ಹೇಳಿದ್ದಾರೆ. ಈ ಮೂಲಕ ರಕೀಬ್ ಆಲಂ ವಿರುದ್ಧ ನೇರ ಆರೋಪ ಮಾಡದೆ, ಸಮನ್ವಯದ ನಿಲುವು ತೋರಿದ್ದಾರೆ.

ಇದೇ ವೇಳೆ ನಟಿ ನೋರಾ ಫತೇಹಿ ಹೇಳಿಕೆಯ ಕುರಿತೂ ಪ್ರೇಮ್ ಪ್ರತಿಕ್ರಿಯಿಸಿದ್ದು, ‘ಯಾವುದೇ ಕಲಾವಿದರೂ ಚಿತ್ರೀಕರಣಕ್ಕೂ ಮೊದಲು ಹಾಡಿನ ಸಾಹಿತ್ಯವನ್ನು ಕೇಳಿ ಅದರ ಅರ್ಥ ತಿಳಿದುಕೊಂಡೇ ಅಭಿನಯಿಸುತ್ತಾರೆ. ಹಾಡು ತಿಳಿಯದೆ ಅಭಿವ್ಯಕ್ತಿ ನೀಡುವುದು ಸಾಧ್ಯವಿಲ್ಲ. ಆದರೆ ವಿವಾದ ಉಂಟಾದ ನಂತರ ಅವರು ಬೇರೆ ರೀತಿಯಲ್ಲಿ ಮಾತನಾಡಿರುವುದು ಅರ್ಥವಾಗುತ್ತಿಲ್ಲ’ ಎಂದು ಹೇಳಿದ್ದಾರೆ. ಚಿತ್ರ ಬಿಡುಗಡೆ ಸಮಯದಲ್ಲಿ ಹಾಡಿನ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದ ಅವರು, ನಂತರದ ಹೇಳಿಕೆಗಳಿಂದ ವಿವಾದದಿಂದ ದೂರ ಉಳಿಯಲು ಪ್ರಯತ್ನಿಸುತ್ತಿರುವ ಸಾಧ್ಯತೆ ಇದೆ ಎಂದು ಪ್ರೇಮ್ ಸೂಚಿಸಿದ್ದಾರೆ.

ಒಟ್ಟಿನಲ್ಲಿ, ‘ಕೆಡಿ: ದ ಡೆವಿಲ್’ ಚಿತ್ರದ ಹಾಡು ಸುತ್ತಲಿನ ವಿವಾದ ಇದೀಗ ಹೊಸ ತಿರುವು ಪಡೆದುಕೊಂಡಿದ್ದು, ನಿರ್ದೇಶಕ ಪ್ರೇಮ್ ಅವರ ಕ್ಷಮೆಯಾಚನೆ ಹಾಗೂ ಹಾಡನ್ನು ಪುನಃ ಬರೆಯುವ ಘೋಷಣೆ ಚರ್ಚೆಗೆ ಗ್ರಾಸವಾಗಿದೆ. ಮುಂದಿನ ದಿನಗಳಲ್ಲಿ ಚಿತ್ರತಂಡ ಯಾವ ರೀತಿಯ ಕ್ರಮ ಕೈಗೊಳ್ಳುತ್ತದೆ ಎಂಬುದರ ಮೇಲೆ ಎಲ್ಲರ ಕಣ್ಣು ನೆಟ್ಟಿದೆ.



## ವಿವಾದದ ನಡುವೆ ನೋರಾ ಫತೇಹಿ ಜೀವನ ಪಯಣ

ಧ್ರುವ ಸರ್ಜಾ ನಟನೆಯ ‘ಕೆಡಿ’ ಚಿತ್ರದ ‘ಸೆರಗ ಸರ್ಸೆ’ ಹಾಡಿನ ಮೂಲಕ ನಟಿ ನೋರಾ ಫತೇಹಿ ರಾಷ್ಟ್ರಮಟ್ಟದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದ್ದಾರೆ. ಹಾಡಿನ ಸಾಹಿತ್ಯ ಹಾಗೂ ಚಿತ್ರೀಕರಣ ಮಹಿಳೆಯರನ್ನು ಅವಹೇಳನ ಮಾಡುವ ರೀತಿಯಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಹಾಡು ಸೆನ್ಸಾರ್ ಮಂಡಳಿ ಗಮನಕ್ಕೂ ಹೋಗಿದ್ದು, ಹಿಂದಿ ಆವೃತ್ತಿಯನ್ನು ತೆಗೆದುಹಾಕಲಾಗಿದೆ ಎನ್ನಲಾಗಿದೆ.

ಕೆನಡಾದಲ್ಲಿ ಜನಿಸಿದ ನೋರಾ ಫತೇಹಿ ಮೊರಾಕ್ಕೊ ಮೂಲದವರು. ಬಾಲ್ಯದಿಂದಲೇ ನೃತ್ಯದ ಮೇಲೆ ಆಸಕ್ತಿ ಹೊಂದಿದ್ದ ಅವರು, ಭಾರತಕ್ಕೆ ಬಂದು ಯಾವುದೇ ಹಿನ್ನೆಲೆ ಇಲ್ಲದೇ ತಮ್ಮದೇ ಆದ ಪರಿಶ್ರಮದಿಂದ ಬಾಲಿವುಡ್ನಲ್ಲಿ ಗುರುತಿಸಿಕೊಂಡಿದ್ದಾರೆ. ಆರಂಭದಲ್ಲಿ ಅನೇಕ ತೊಂದರೆಗಳನ್ನು ಎದುರಿಸಿದರೂ, ‘ದಿಲ್ಬರ್’ ಸೇರಿದಂತೆ ಹಲವು ಹಿಟ್ ಹಾಡುಗಳ ಮೂಲಕ ‘ಡ್ಯಾನ್ಸ್ ಕ್ವೀನ್’ ಎಂಬ ಹೆಸರನ್ನು ಗಳಿಸಿದ್ದಾರೆ.

ಈಗ ‘ಕೆಡಿ’ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿರುವ ನೋರಾ, ತಮ್ಮ ಮೊದಲ ಕನ್ನಡ ಸಿನಿಮಾದಲ್ಲೇ ವಿವಾದಕ್ಕೆ ಸಿಲುಕಿದ್ದಾರೆ. ಹಾಡಿನ ಸುತ್ತಲಿನ ಚರ್ಚೆಗಳು ಸಿನಿಮಾ ಕ್ಷೇತ್ರದಲ್ಲಿ ಅಶ್ಲೀಲತೆ ಹಾಗೂ ಅದರ ಬಳಕೆ ಬಗ್ಗೆ ರಾಷ್ಟ್ರಮಟ್ಟದಲ್ಲಿ ಚರ್ಚೆಗೆ ಕಾರಣವಾಗಿವೆ.

## ಅಲ್ಲು ಅರ್ಜುನ್ ಚಿತ್ರದಲ್ಲಿ ಅನುಷ್ಕಾ ಕಂಬ್ಯಾಕ್?



ಸುಮಾರು ಎಂಟು ವರ್ಷಗಳ ಬಳಿಕ ನಟಿ ಅನುಷ್ಕಾ ಶರ್ಮಾ ಮತ್ತೆ ಚಿತ್ರರಂಗಕ್ಕೆ ಮರಳಲಿದ್ದಾರೆ ಎಂಬ ಸುದ್ದಿಯು ಸಿನಿ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಸ್ಟೈಲಿಶ್ ಸ್ಟಾರ್ ಅಲ್ಲು ಅರ್ಜುನ್ ಹಾಗೂ ಯಶಸ್ವಿ ನಿರ್ದೇಶಕ ಅಟ್ಲೀ ಕಾಂಬಿನೇಷನ್‌ನಲ್ಲಿ ಮೂಡಿ ಬರುತ್ತಿರುವ ಭಾರಿ ಬಜೆಟ್ ಸೈನ್ಸ್ ಫಿಕ್ಷನ್ ಸಿನಿಮಾದಲ್ಲಿ ಅನುಷ್ಕಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಬಹುದು ಎಂಬ ಮಾತು ಹರಿದಾಡುತ್ತಿದೆ. ಈಗಾಗಲೇ ದೀಪಿಕಾ ಪಡುಕೋಣೆ ಈ ಚಿತ್ರಕ್ಕೆ ಸೇರಿಕೊಂಡಿದ್ದಾರೆ ಎನ್ನಲಾಗುತ್ತಿದ್ದು, ಹಾಲಿವುಡ್ ಮಟ್ಟದ ತಾಂತ್ರಿಕತೆ ಹಾಗೂ ವಿಎಫ್‌ಎಕ್ಸ್ ಸಹಾಯದಿಂದ ಚಿತ್ರ ನಿರ್ಮಾಣವಾಗುತ್ತಿದೆ. ‘ಜೀರೋ’ ಚಿತ್ರದ ಬಳಿಕ ಅನುಷ್ಕಾ ಶರ್ಮಾ ಯಾವುದೇ ಸಿನಿಮಾದಲ್ಲಿ ನಟಿಸದೇ ಇದ್ದ ಹಿನ್ನೆಲೆ, ಈ ಚಿತ್ರವೇ ಅವರ ಕಂಬ್ಯಾಕ್ ಆಗಬಹುದೇ ಎನ್ನುವ ಕುತೂಹಲ ಹೆಚ್ಚಾಗಿದೆ. ವರದಿಗಳ ಪ್ರಕಾರ ಅಟ್ಲೀ ಅವರು ಅನುಷ್ಕಾ ಜೊತೆ ಮಾತುಕತೆ ನಡೆಸಿದ್ದಾರೆ, ಆದರೆ ಅಧಿಕೃತ ಘೋಷಣೆ ಇನ್ನೂ ಹೊರಬಂದಿಲ್ಲ, ಅಲ್ಲದೆ, ಅಟ್ಲೀ ಸಿನಿಮಾಗಳಲ್ಲಿ ನಾಯಕಿಯರಿಗೆ ಮಹತ್ವಪೂರ್ಣ ಪಾತ್ರಗಳಿರುತ್ತವೆ ಎಂಬ ಕಾರಣದಿಂದ, ಅನುಷ್ಕಾ ಒಪ್ಪಿಕೊಂಡರೆ ಅವರು ಪವರ್ ಫುಲ್ ಪಾತ್ರದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಇದೇ ವೇಳೆ ಏಪ್ರಿಲ್ 8ರಂದು ಅಲ್ಲು ಅರ್ಜುನ್ ಹುಟ್ಟುಹಬ್ಬದಂದು ಚಿತ್ರದ ಟೈಟಲ್ ಹಾಗೂ ಕಾಸ್ಟ್ ಕುರಿತು ಸ್ಪಷ್ಟ ಮಾಹಿತಿ ಬಹಿರಂಗವಾಗುವ ನಿರೀಕ್ಷೆಯಿದೆ.



POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 22.3.2026

# ಕ್ರೇಜಿಬ್ರಹ್ಮ ಜೋಡಿಗೆ ಗೌರವ ಸಮಾರಂಭ



ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಸುವರ್ಣ ಅಧ್ಯಾಯ ಬರೆದ ಜೋಡಿ ಎಂದರೆ ನಟ ರವಿಚಂದ್ರನ್ ಮತ್ತು ಸಂಗೀತ ನಿರ್ದೇಶಕ ಹಂಸಲೇಖ. ರೊಮ್ಯಾಂಟಿಕ್ ಹಾಡುಗಳು, ಹೊಸತನದ ಕಥೆಗಳು ಹಾಗೂ ವಿಭಿನ್ನ ಪ್ರಸ್ತುತಿಗಳ ಮೂಲಕ 80-90ರ ದಶಕದಲ್ಲಿ ಚಿತ್ರರಂಗವನ್ನು ಕಂಗೊಳಿಸಿದ ಈ ಜೋಡಿ ಈಗ 40 ವರ್ಷಗಳ ಸಂಭ್ರಮವನ್ನು ಆಚರಿಸುತ್ತಿದೆ. ಈ ಸಾಧನೆಯನ್ನು ಗುರುತಿಸಿ 'ಕ್ರೇಜಿಬ್ರಹ್ಮ' ಎಂಬ ಹೆಸರಿನಲ್ಲಿ ವಿಶೇಷ ಗೌರವ ಸಮಾರಂಭವನ್ನು ಆಯೋಜಿಸಲಾಗಿದೆ.

'ಪ್ರೇಮಲೋಕ', 'ರಣಧೀರ', 'ಅಂಜದಗಂಡು', 'ಶಾಂತಿಕ್ರಾಂತಿ' ಸೇರಿದಂತೆ ಅನೇಕ ಸೂಪರ್ ಹಿಟ್ ಸಿನಿಮಾಗಳು ಈ ಜೋಡಿಯ ಖಾತೆಯಲ್ಲಿ ಸೇರಿವೆ. ಈ ಚಿತ್ರಗಳು ಕೇವಲ ಬಾಕ್ಸ್ ಆಫೀಸ್ ಯಶಸ್ಸು ಮಾತ್ರವಲ್ಲ, ಕನ್ನಡ ಸಿನಿ ಪ್ರೇಕ್ಷಕರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದಿವೆ. ವಿಶೇಷವಾಗಿ ಹಂಸಲೇಖ ಅವರ ಸಾಹಿತ್ಯ ಮತ್ತು ಸಂಗೀತ, ರವಿಚಂದ್ರನ್ ಅವರ ವಿಭಿನ್ನ ಅಭಿನಯ ಮತ್ತು ನಿರ್ದೇಶನದೊಂದಿಗೆ ಸೇರಿ ಹೊಸ ಟ್ರೆಂಡ್ ಸೃಷ್ಟಿಸಿತ್ತು.

ಈ ಸಂಭ್ರಮದ ಅಂಗವಾಗಿ ಮೇ 30ರಂದು ಕೆಂಗೇರಿಯ ಜೆ.ಕೆ. ಗ್ರ್ಯಾಂಡ್ ಅರೇನಾದಲ್ಲಿ ಭವ್ಯ ಕಾರ್ಯಕ್ರಮ ನಡೆಯಲಿದೆ. ಸಂಜೆ 6ರಿಂದ ಆರಂಭವಾಗಿ ಮಧ್ಯರಾತ್ರಿ ತನಕ ಸಾಗಲಿರುವ ಈ ಕಾರ್ಯಕ್ರಮದಲ್ಲಿ ರವಿಚಂದ್ರನ್‌ಹಂಸಲೇಖ ಕಾಂಬಿನೇಷನ್‌ನ ಜನಪ್ರಿಯ ಹಾಡುಗಳನ್ನು ವೇದಿಕೆಯಲ್ಲಿ ಗಾಯನದ ಮೂಲಕ ಮರುಜೀವ ನೀಡಲಾಗುತ್ತದೆ. ಟಾಲಿವುಡ್ ನಟ ಚಿರಂಜೀವಿ, ನಟಿ ಶಿಲ್ಪಾ ಶೆಟ್ಟಿ ಸೇರಿದಂತೆ ಹಲವು ಗಣ್ಯರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ. ಸುಮಾರು 10 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಭಾಗವಹಿಸುವ ನಿರೀಕ್ಷೆಯಿದ್ದು, ಇದು ಕನ್ನಡ ಚಿತ್ರರಂಗದ ಮಹತ್ವದ ಕ್ಷಣವಾಗಲಿದೆ.

ಈ ಸಂದರ್ಭದಲ್ಲಿ ಮಾತನಾಡಿದ ರವಿಚಂದ್ರನ್, ಹಂಸಲೇಖರೊಂದಿಗೆ ತಮ್ಮ ನಂಟನ್ನು ಭಾವುಕರಾಗಿ ನೆನೆದಿದ್ದಾರೆ. 'ನನಗೆ ಆರಂಭದಲ್ಲಿ ಏನೂ ತಿಳಿದಿರಲಿಲ್ಲ. ಹಂಸಲೇಖ ಬರೆದ ಸಾಹಿತ್ಯವೇ ನನಗೆ ದಾರಿ ತೋರಿಸಿತು. ಅವರೇ ನನ್ನನ್ನು 'ಕ್ರೇಜಿ ಸ್ಟಾರ್' ಆಗಿ ರೂಪಿಸಿದರು. ನಾವು ಒಂದಾಗಿ ಕೆಲಸ ಮಾಡದಿದ್ದರೂ ಸ್ನೇಹದಲ್ಲಿ ಯಾವುದೇ ಬಿರುಕು ಬಾರದಿರುವುದು ನಮ್ಮ ಭಾಗ್ಯ' ಎಂದು ಹೇಳಿದರು.

ಇಬ್ಬರ ನಡುವಿನ ನಗು, ಸ್ನೇಹ ಮತ್ತು ಕಲಾತ್ಮಕ ಒಗ್ಗಟ್ಟು ಅವರ ಯಶಸ್ಸಿನ ಪ್ರಮುಖ ಕಾರಣ ಎಂದು ಅವರು ಹೇಳಿದರು. ಈ ಜೋಡಿ ನೀಡಿದ ಸಿನಿಮಾಗಳು ಮತ್ತು ಹಾಡುಗಳು ಇಂದಿಗೂ ಜನಮನದಲ್ಲಿ ಜೀವಂತವಾಗಿವೆ. 'ಕ್ರೇಜಿಬ್ರಹ್ಮ' ಸಂಭ್ರಮವು ಅವರ ಕಲಾತ್ಮಕ ಪ್ರಯಾಣಕ್ಕೆ ಮತ್ತೊಂದು ಮೈಲುಗಲ್ಲಾಗಲಿದೆ.

# 'ಲವ್ ಮಾಕ್ಟೇಲ್ 3': ಭಾವನೆಹಾಸ್ಯದ ಫ್ಯಾಮಿಲಿ ಪ್ಯಾಕೇಜ್

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ 'ಲವ್ ಮಾಕ್ಟೇಲ್ 3' ಚಿತ್ರವು ಭಾವನಾತ್ಮಕ ಕಥನದ ಮೂಲಕ ಪ್ರೇಕ್ಷಕರ ಮನಸೂರೆಗೊಳ್ಳುವ ಪ್ರಯತ್ನ ಮಾಡುತ್ತದೆ. 2020ರಲ್ಲಿ ಬಿಡುಗಡೆಯಾದ 'ಲವ್ ಮಾಕ್ಟೇಲ್'ಪ ಮತ್ತು 2022ರಲ್ಲಿ ಬಂದ ಅದರ ಮುಂದುವರಿದ ಭಾಗದ ಬಳಿಕ, ನಾಲ್ಕು ವರ್ಷಗಳ ನಂತರ ಈ ಮೂರನೇ ಭಾಗ ತೆರೆಗೆ ಬಂದಿದೆ. ಹಿಂದಿನ ಭಾಗದ ಅಂತ್ಯದಲ್ಲಿ ಆದಿ ತನ್ನ ಜೀವನದಲ್ಲಿ ಎದುರಿಸಿದ ನೋವುಗಳ ನಡುವೆಯೇ ಅನಾಥಾಶ್ರಮದಿಂದ ರಮ್ಯಾಳನ್ನು ದತ್ತು ಪಡೆದುಕೊಳ್ಳುತ್ತಾನೆ. ಅಲ್ಲಿಂದ ಮುಂದುವರಿಯುವ ತಂದೆ ಮಗಳ ಸಂಬಂಧವೇ ಈ ಚಿತ್ರದ ಹೃದಯವಾಗಿದೆ.

ಈ ಭಾಗದಲ್ಲಿ ಆದಿ ತನ್ನ ಹೆಂಡತಿ ನಿಧಿಯ ನೆನಪಿನಲ್ಲಿ ಮಗಳ ಹೆಸರನ್ನೇ 'ನಿಧಿ' ಎಂದು ಬದಲಾಯಿಸಿಕೊಂಡು, ಆಕೆಯೊಂದಿಗೆ ಜೀವನದಲ್ಲಿ ಹೊಸ ಅರ್ಥ ಹುಡುಕುತ್ತಿರುತ್ತಾನೆ. ಮಗಳು ಏಳು ವರ್ಷ ವಯಸ್ಸಿಗೆ ಬಂದಾಗ ಅವರ ಬದುಕು ಸ್ಥಿರವಾಗುತ್ತಿದೆ ಎನ್ನುವ ಹೊತ್ತಿನಲ್ಲಿ, ಅನಿರೀಕ್ಷಿತ ಸಮಸ್ಯೆಯೊಂದು ಎದುರಾಗುತ್ತದೆ.



ಅದೇ ಚಿತ್ರದ ಮುಖ್ಯ ಸಂಘರ್ಷ. ಆ ಸಮಸ್ಯೆ ಏನು, ಅದನ್ನು ಆದಿ ಹೇಗೆ ಎದುರಿಸುತ್ತಾನೆ ಎಂಬುದು ಚಿತ್ರದ ಕುತೂಹಲಕಾರಿ ಅಂಶವಾಗಿದೆ. ಚಿತ್ರದಲ್ಲಿ ಮಿಲನಾ ನಾಗರಾಜ್, ಅಮೃತಾ ಅಯ್ಯಂಗಾರ್, ರೇಚೆಲ್ ಡೇವಿಡ್ ಜೊತೆಗೆ ಶ್ವೇತಾ ಪ್ರಸಾದ್, ರಜನಿ ಭಾರದ್ವಾಜ್ ಮತ್ತು ನಯಾರಾ ಮೊದಲಾದವರು ಕಾಣಿಸಿಕೊಂಡಿದ್ದು, ಮಹಿಳಾ ಪಾತ್ರಗಳು ಕಥೆಗೆ ಹೆಚ್ಚಿನ ತೂಕ ನೀಡುತ್ತವೆ. ವಿಶೇಷವಾಗಿ ಪುಟಾಣಿ ಸಂವೃತ ಅಭಿನಯ ಚಿತ್ರದ ದೊಡ್ಡ ಹೈಲೈಟ್. ಆಕೆಯ ನೈಸರ್ಗಿಕ ಅಭಿನಯ ಮತ್ತು ಚುಟುಕು ನಟನೆ ಪ್ರೇಕ್ಷಕರ ಮನ ಗೆಲ್ಲುತ್ತದೆ. ತಂದೆಯಾಗಿ ಡಾರ್ಲಿಂಗ್ ಕೃಷ್ಣ ಪ್ರೌಢ ಅಭಿನಯ ನೀಡಿದ್ದು, ಪಾತ್ರದ ಭಾವನೆಗಳನ್ನು ನಿಖರವಾಗಿ ತೋರಿಸಿದ್ದಾರೆ.


ಕಥೆ ಸರಳವಾಗಿದ್ದರೂ, ನಿರ್ದೇಶನ ಮತ್ತು ಚಿತ್ರಕಥೆ ಚಿತ್ರವನ್ನು ಹಿಡಿತದಲ್ಲಿ ಇಡುತ್ತದೆ. ಪ್ರಾರಂಭದಿಂದ ಅಂತ್ಯದವರೆಗೆ ಬೋರ್ ಎನಿಸುವ ಕ್ಷಣಗಳು ಕಡಿಮೆ. ಮೊದಲಾರ್ಧ ಸ್ವಲ್ಪ ನಿಧಾನಗತಿಯಲ್ಲಿ ಸಾಗಿದರೂ, ದ್ವಿತೀಯಾರ್ಧದಲ್ಲಿ ಕಥೆ ಗಟ್ಟಿಯಾಗಿ ನಿಂತುಕೊಳ್ಳುತ್ತದೆ. ವಿಶೇಷವಾಗಿ ದತ್ತು ಪ್ರಕ್ರಿಯೆ ಮತ್ತು ಕಾನೂನು ಸಂಬಂಧಿತ ಅಡಚಣೆಗಳನ್ನು ತೋರಿಸಿರುವ ಭಾಗ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸುತ್ತದೆ. ಚಿತ್ರದಲ್ಲಿನ ಕೋರ್ಟ್ ದೃಶ್ಯಗಳು ಕಥೆಗೆ ಗಂಭೀರತೆ ನೀಡುತ್ತವೆ.

ಹಾಸ್ಯ ಮತ್ತು ಭಾವನೆಗಳ ಸಮತೋಲನ ಚಿತ್ರದ ಮತ್ತೊಂದು ಪ್ಲಸ್ ಪಾಯಿಂಟ್. ಕೆಲವು ದೃಶ್ಯಗಳು ಕಣ್ಣಂಚು ಒದ್ದೆಯಾಗಿಸುವಂತಿವೆ. ಜೊತೆಗೆ ಸ್ನೇಹಿತರ ಪಾತ್ರಗಳು ಮತ್ತು ಕುಟುಂಬದ ವಾತಾವರಣ ಚಿತ್ರವನ್ನು ಹತ್ತಿರವಾಗಿಸುತ್ತದೆ. ತಾಂತ್ರಿಕವಾಗಿ ನೋಡಿದರೆ, ಕ್ಯಾಮೆರಾ ವರ್ಕ್ ವಿಶೇಷವಾಗಿ ಫಾರಿನ್ ಲೊಕೇಷನ್‌ಗಳಲ್ಲಿ ಕಣ್ಣಿಗೆ ಹಬ್ಬದಂತಿದೆ. ಸಂಗೀತವೂ ಕಥೆಗೆ ತಕ್ಕಂತೆ ಇದ್ದರೂ, ಹಾಡುಗಳು ಹೆಚ್ಚು ಕಾಲ ನೆನಪಿನಲ್ಲಿ ಉಳಿಯುವುದಿಲ್ಲ. ಒಟ್ಟಾರೆ, 'ಲವ್ ಮಾಕ್ಟೇಲ್ 3' ಒಂದು ಪಕ್ಕಾ ಫ್ಯಾಮಿಲಿ ಎಂಟರ್ಟೈನರ್. ಕೆಲವು ಪುನರಾವರ್ತಿತ ದೃಶ್ಯಗಳು ಮತ್ತು ನಿಧಾನಗತಿಯ ಅಂಶಗಳನ್ನು ಹೊರತುಪಡಿಸಿದರೆ, ಚಿತ್ರ ಪ್ರೇಕ್ಷಕರಿಗೆ ಉತ್ತಮ ಅನುಭವ ನೀಡುತ್ತದೆ. ಹಿಂದಿನ ಎರಡು ಭಾಗಗಳನ್ನು ಮೆಚ್ಚಿದವರಿಗೆ ಈ ಮೂರನೇ ಭಾಗ ನಿರಾಶೆ ನೀಡುವುದಿಲ್ಲ. ಭಾವನೆ, ಹಾಸ್ಯ ಮತ್ತು ಸಂಬಂಧಗಳ ಮೌಲ್ಯವನ್ನು ಮನಮಿಡಿಯುವ ರೀತಿಯಲ್ಲಿ ಹೇಳುವ ಈ ಸಿನಿಮಾ, ಕುಟುಂಬ ಸಮೇತ ನೋಡಲು ಸೂಕ್ತವಾದ ಚಿತ್ರವಾಗಿದೆ.

# 'ಧುರಂಧರ್-2'ಗೆ ರಾಜಮೌಳಿ ಮೆಚ್ಚುಗೆ



ಖ್ಯಾತ ನಿರ್ದೇಶಕ ಎಸ್.ಎಸ್. ರಾಜಮೌಳಿ ಅವರು 'ಧುರಂಧರ್ 2' ಸಿನಿಮಾವನ್ನು ವೀಕ್ಷಿಸಿ ಭಾರಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ನಾಲ್ಕು ಗಂಟೆಗಳ ಅವಧಿಯ ಈ ಭವ್ಯ ಚಿತ್ರವನ್ನು ನಿರ್ಮಿಸಿ ಬಿಡುಗಡೆ ಮಾಡಿರುವ ತಂಡದ ಧೈರ್ಯವನ್ನು ಅವರು ಕೊಂಡಾಡಿದ್ದಾರೆ. ಚಿತ್ರಕಥೆ, ನಿರ್ದೇಶನ,



ಸಂಗೀತ, ತಾಂತ್ರಿಕ ಅಂಶಗಳು ಹಾಗೂ ಭಾವನಾತ್ಮಕ ಅಂಶಗಳ ಸಮನ್ವಯ ಚಿತ್ರವನ್ನು ವಿಶೇಷ ಮಟ್ಟಕ್ಕೆ ಏರಿಸಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ತಮ್ಮ ಪ್ರತಿಕ್ರಿಯೆ ಹಂಚಿಕೊಂಡ ಅವರು, ಚಿತ್ರದ ಬರವಣಿಗೆ ಮತ್ತು ತಿರುವುಗಳು ಪ್ರೇಕ್ಷಕರನ್ನು ಕೊನೆಯವರೆಗೂ ಹಿಡಿದಿಡುವಲ್ಲಿ ಯಶಸ್ವಿಯಾಗಿವೆ ಎಂದು ತಿಳಿಸಿದ್ದಾರೆ.

ರಣವೀರ್ ಸಿಂಗ್ ಅಭಿನಯವನ್ನು ಅವರು ವಿಶೇಷವಾಗಿ ಹೊಗಳಿ, ಶೆಡ್‌ನಲ್ಲಿ ನಡೆಯುವ ಸನ್ನಿವೇಶದಲ್ಲಿ ಅವರ ಅಭಿನಯವೇ ಒಂದು ಮಾಸ್ಟರ್‌ಕ್ಲಾಸ್ ಎಂದು ಹೇಳಿದ್ದಾರೆ. ಹಮ್ಜಾ ಮತ್ತು ಜಸ್ಕಿರತ್ ಪಾತ್ರಗಳಲ್ಲಿ ಅವರು ನೀಡಿದ ಅಭಿನಯ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ ಎಂದೂ ಹೇಳಿದ್ದಾರೆ. ನಟ ಮಾಧವನ್ ಅವರ ಅಭಿನಯವನ್ನೂ ಅವರು ಶ್ಲಾಘಿಸಿದ್ದು, ಸಂಪೂರ್ಣ ನಟವರ್ಗದ ಪ್ರದರ್ಶನ ಗಮನಾರ್ಹವಾಗಿದೆ ಎಂದು ತಿಳಿಸಿದ್ದಾರೆ. ಮೊದಲ ಭಾಗಕ್ಕಿಂತ 'ಧುರಂಧರ್ 2' ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ.

ಮಹೇಶ್ ಬಾಬು, ಅಲ್ಲು ಅರ್ಜುನ್ ಸೇರಿದಂತೆ ಅನೇಕ ತಾರೆಯರು ಈಗಾಗಲೇ ಈ ಸಿನಿಮಾವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿರುವ ಹಿನ್ನೆಲೆ, ರಾಜಮೌಳಿ ಅವರ ಪ್ರಶಂಸೆ ಚಿತ್ರಕ್ಕೆ ಇನ್ನಷ್ಟು ಮೆರಗು ತಂದಿದೆ. ನಾಲ್ಕು ಗಂಟೆಗಳ ಸಿನಿಮಾ ನಿರ್ಮಿಸಿ ಅದನ್ನು ಯಶಸ್ವಿಯಾಗಿ ಪ್ರೇಕ್ಷಕರ ಮುಂದೆ ತರುವುದು ದೊಡ್ಡ ಸಾಹಸವಾದರೂ, ಈ ಸಿನಿಮಾ ಕೊನೆಯ ಫ್ರೇಮ್‌ವರೆಗೂ ಪ್ರೇಕ್ಷಕರನ್ನು ಹಿಡಿದಿಡುತ್ತದೆ ಎಂದು ಅವರು ಹೇಳಿದ್ದಾರೆ. ಒಟ್ಟಿನಲ್ಲಿ, 'ಧುರಂಧರ್ 2' ಸಿನಿಮಾ ಕಥೆ, ಅಭಿನಯ ಮತ್ತು ತಾಂತ್ರಿಕ ಅಂಶಗಳ ಸಮನ್ವಯದಿಂದ ಸಿನಿಪ್ರೇಕ್ಷಕರ ಮನಗೆದ್ದಿದೆ.

# ಧರ್ಮದ ಹೆಸರಿನಲ್ಲಿ ಹಿಂಸೆ ಬೇಡ: ರಮ್ಯಾ



'ಧುರಂಧರ್ 2' ಸಿನಿಮಾ ಕುರಿತು ನಟಿ ರಮ್ಯಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಧರ್ಮದ ಹೆಸರಿನಲ್ಲಿ ಹಿಂಸೆ ಪ್ರಚಾರ ಮಾಡಬಾರದು ಎಂದು ಹೇಳಿದ್ದಾರೆ. ಪವಿತ್ರ ಗ್ರಂಥಗಳನ್ನು ತಪ್ಪಾಗಿ ಅರ್ಥೈಸಿ ಕಥೆಗೆ ತಕ್ಕಂತೆ ಬಳಸುವುದು ಸರಿಯಲ್ಲ ಎಂದು ಅವರು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿದ ರಮ್ಯಾ, ಭಗವದ್ಗೀತೆಯ ನಿಜವಾದ ಅರ್ಥವನ್ನು ತಪ್ಪಾಗಿ ತೋರಿಸುವುದು ಅಸಮಾಧಾನಕಾರಿ ಎಂದಿದ್ದಾರೆ. ಕೃಷ್ಣನು ಅರ್ಜುನನಿಗೆ ಹೇಳುವ ಯುದ್ಧವು ಹೊರಗಿನ ಯುದ್ಧವಲ್ಲ, ಮಾನವನೊಳಗಿನ ಮನಸ್ಸಿನ ಸಂಘರ್ಷವೆಂದು ಅವರು ವಿವರಿಸಿದ್ದಾರೆ. ಇದೇ ವೇಳೆ, ಸಿನಿಮಾಗಳಲ್ಲಿ ಪವಿತ್ರ ಗ್ರಂಥಗಳನ್ನು ತಿರುಚಿ ಹಿಂಸೆ ಸಮರ್ಥಿಸುವ ಪ್ರವೃತ್ತಿ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಸಿನಿಮಾ ಮಾಡಬಹುದು, ಆದರೆ ಜನರ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಇರಬಾರದು ಎಂದು ಅವರು ಹೇಳಿದ್ದಾರೆ.

Vol. 41 No. 42 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news